G R S App F IX 4]

1948 - 49

File No 96-48

Previous References

Serial Nos 161, 162

Later References

GENERAL AND REVENUE SECRETARIAT

Serial Nos Two

Part B for July '49

SUBJECT

Expenditure of Rs 175/= incurred by The Kolar Town Municipal Council in connection with the presentation of an address to the Minister for Rev & F W during his visit to the town on 5-5-49

To
The D C Kolar
" Comptroller to Govt
" Asst T
at Kolar

Cy O dNo dt 1957/D 6-7-49

Sanction

GENERAL & REVENUE SECRETARIAT
9606
21 JUN 1949
MUNICIPAL BRANCH

No. Mc 110 Mua 3
48-49

Office of the President,
Town Municipal Council, Kolar,
Dated the 13th June 1949

FROM

MK 96-48-161

THE PRESIDENT,
TOWN MUNICIPAL COUNCIL,
KOLAR

TO

The Secretary to the Governmentof Mysore,

General Department, BANGALORE

17.6.49

SECRETARY TO GOVT OF MYSORE
No 17/6
Date
GENERAL DEPARTMENTS

RE Incurring an expenditure of Rs 175/- at the time of Visit of the Hon' Minister for Revenue & Public Works

In enclosing herewith the resolution of the Municipal Council Dated 28-5-49, approving the expenditure of Rs 175/- incurred during the visit of the Hon' Minister for Revenue and Public Works, I have the honour to state that the Municipal Council presented an address to the Minister in connection with the water situation of Kolar and requested theGovernment for sanctioning rupees two Lakhs for this purpose A copy of the address is enclosed for information

I, therefore, request you kindly to accord sanction of Government to this expenditure which will be met out of the provision sanctioned under 'Receiption Charges' in the sanctioned budget of 1948-49

Yours faithfully,

PRESIDENT.

SECRETARY TO GOVT OF MYSORE
No
Date 25/6
GENERAL DEPARTMENTS

THE MINISTER FOR
LOCAL SELF GOVT ME
No 6197
Date 29/6/49

Muncapal Council Kolar

Meeting of the Muncapal Council held on 28-5-1949 at 4-30 P.M.

Subject Sheet

Section - - - - - - - Subject no - - 12. -

Subject matter in brief

P. W ಮಂತ್ರಿಗಳು ಕೋಲಾರಕ್ಕೆ ಬಂದು ಮಾ ಪಿಸಿಪ್ಪ ಕಾಲದಲ್ಲಿ ಹೆಚ್ಚಳಕ್ಕಿಂಬುವದು ಮಿಸಿದ ಮಿ ಮೆಂಬರಾಂದೆಂ ಮುಖ್ಯ ಮಂತ್ರಿಗೆ ಪತ್ರ ರಾಯಿಸಿ ಮನವಿ ಪಿಸಿದ ವಿಚಾರ

Resolution

ತಲಸಂಖ್ಯಾಂಕ್ಷದಲ್ಲಿ ವಿಚಾರಮಾಡಲಾಗಿ ಅಂತೆಲ್ಲಿ Rs 175/- ರೂ ಮಾಲಿಗೆಗೆ ಮೀರಲಿ ನವರೂ ಪಿಸಿಲುವ Reception Charge ದಲ್ಲಿ ವಿಚಾರ ಮಾಡಲು ದೆಂದು ನಿರ್ಣಯ ಮಾಡಿ ರಾಂಯಿತು.

P R Munuswamy
✓PRESIDENT
Town Municipal Council,
KOLAR
13/6/49

Sd C H Venkataramanappa
President
T. M. C Kolar.

G R S App F VI—G 2]

SUBJECT

Diary No of letter replied to

General and Revenue Secretariat

( )

the *19*

Date of issue 6 4 1949

Signed by Sn G N Rao

May this be—

(i) printed?

(ii) treated as a standing order?

(iii) published in the Gazette English Part?

(iv) translated?

v) placed at the disposal of the Press?

(vi) published in the Gazette Kannada Part?

4 copies

Section GRL

File No 96-48

Serial No 162

Proceedings of the Government of His Highness the Maharaja of Mysore

Read— Letter No HC 110/48 49 dt 13 6 4 from the Pdt, Town Municipal Council Kolar, requesting sanction to the resolution of the Council dated the 28th May 1949 of the Council in regard to the approving the expenditure of Rs 175/- incurred in connection with the reception ~~Drawing the Order thereon. No~~ ~~Visit of the Hon'ble~~ Minister for Revenue and Public Works during his visit to the town on 5 5 49, the same expenditure on this behalf being met from out of the Provision made under "Reception Charges" in the

current year's budget of the mkt

Order No L195-7 | KL 96-48-162
6/7/49

Sanctioned

27/6/49

An Secy to Govt
Wks Gl Deptt
By 24-6-49

To the Dy Commr Kolar ✓
The Pdt Town mkt ch, Kolar ✓
The Comptroller ✓

List of Enclosures

Copied by
Examined by

WD 03696—GPB—30 000—2 2 40

PROCEEDINGS OF THE GOVERNMENT OF HIS HIGHNESS
THE MAHARAJA OF MYSORE

READ:-

Letter No.H.C.110/48-49 dated 13th June 1949 from the ~~Municipal~~ President, Town Municipal Council, Kolar, requesting sanction to the resolution dated the 28th May 1949 of the Municipal Council approving of an expenditure of Rs.175/- incurred in connection with the presentation of an address to the Minister for Revenue and Public Works during his visit to the town on 5th May 1949, the same being met from out of the provision made under "Reception charges" in the current year's budget budget of the Municipality.

ORDER NO: L 195-7|RL-96-48-162

Dated, Bangalore, the 6 7 49

S A N C T I O N E D.

for General Secretary to Government.

To

The Deputy Commissioner, Kolar District.
" Comptroller to Government.
" President, Town Municipal Council, Kolar.

ಶ್ರೀಃ

ಮೈಸೂರು ಸಂಸ್ಥಾನದ ಸಾಮ್ರಾಜ್ಯ ರವಿನ್ಯೂ ಮತ್ತು ಮೆರಾಮತ್ ಮಂತ್ರಿಗಳಾದ

ಶ್ರೀಮಾನ್ ಹೆಚ್ ಸಿದ್ದಯ್ಯ, ಬಿ ಎ, ಎಲ್‌ಎಲ್‌ಬಿ,

ಅವರ ಸಮಕ್ಷಮದಲ್ಲಿ

ಕೋಲಾರ ಟೌನ್ ಪೌರಸಭಾ ಅಧ್ಯಕ್ಷರು ಮತ್ತು ಸದಸ್ಯರು ಅರ್ಪಿಸಿದ

ಬಿನ್ನವತ್ತಳೆ

ಸ್ವಾಮಿ

ನಮ್ಮ ಆಹ್ವಾನವನ್ನು ಮನ್ನಿಸಿ ತಮ್ಮ ಈಗಿನ ಅನೇಕ ಕೆಲಸಗಳ ಮಧ್ಯೆ ಅವಕಾಶಮಾಡಿಕೊಂಡು ತಾವು ಇಲ್ಲಿಗೆ ದಯಮಾಡಿಸಿದುದಕ್ಕಾಗಿ ತಮಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತೇವೆ, ಮತ್ತು ಇತಿಹಾಸ ಪ್ರಸಿದ್ಧವಾದ ಈ ನಮ್ಮ ನಗರಕ್ಕೆ ತಮ್ಮನ್ನು ಈ ನಗರದ ಪುರನಿವಾಸಿಗಳ ಪರವಾ ಸ್ವಾಗತಿಸಲು ಹರ್ಷಿಸುತ್ತೇವೆ ತಾವು ಈ ಕೋ ಎರಾರ ಜಿಲ್ಲಾ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ದಯಮಾಡಿಸುವುದು ನಮ್ಮ ಸುಯೋಗವೆಂದು ಭಾವಿಸುತ್ತೇವೆ ತಾವು ಈ ಸಮ್ಮೇಳನದಲ್ಲಿ ತಮ್ಮ ಆವಗಾಹನೆಗೆ ತರಲ್ಪಡುವ ಈ ಜಿಲ್ಲೆಯ ಅನೇಕ ಸಮಸ್ಯೆಗಳನ್ನು ಪರಿಹರಿಸಿಕೊಡುವಿರೆಂದು ನಾವು ಸಂಪೂರ್ಣ ಭರವಸೆಯುಳ್ಳವರಾಗಿರುತ್ತೇವೆ

ನಾವು ತಮ್ಮ ಆಗಮನವನ್ನು ಅನೇಕ ದಿವಸಗಳಿಂದಲೂ ಬಹಳ ಆಕಾಂಕ್ಷೆಯಿಂದ ನೀಕ್ಷಿಸುತ್ತಿದ್ದೆವು ಈ ನಮ್ಮ ಆಕಾಂಕ್ಷೆ ಈಗ ನೆರವೇರಿದಂತಾಗಿ ನಮಗೆ ತುಂಬಾ ಹರ್ಷವುಂಟಾಗಿರುತ್ತೆ ತಾವು ಇಲ್ಲಿಗೆ ದಯಮಾಡಿಸಿರುವ ಈ ಸುಸಮಯದಲ್ಲಿ ಈ ನಮ್ಮ ನಗರದ ಅತ್ಯಂತ ಮುಖ್ಯವಾದ ನೀರಿನ ಕೊರತೆಯನ್ನು ತಮ್ಮ ಅವಗಹನೆಗೆ ತಂದು ಅದನ್ನು ಅತಿ ತ್ವರಿತವಾಗಿ ಪರಿಹರಿಸಿಕೊಡಬೇಕೆಂದ ಪ್ರಾರ್ಥಿಸ ಬಯಸುತ್ತೇವೆ

ಈ ಪೌರಸಭೆಯ ನೀರು ಸರಬರಾಜು ವ್ಯವಸ್ಥೆಯನ್ನು ಈಗ್ಗೆ 20 ವರ್ಷಗಳ ಕೆಳಗೆ ಈ ನಗರದ ಪ್ರಜಾ ಸಂಖ್ಯೆ 12 000 ಮಾತ್ರ ವಿದ್ದಾಗ ಲೋ ಕಸೇವಾನಿರತ ಶ್ರೀ ಚಿಕ್ಕಚನ್ನಂಜಪ್ಪಶಟ್ಟರವರ ಸಹಾಯದಿಂದಲು ಏರ್ಪಡಿಸಿದ್ದಾಗಿರುತ್ತೆ ಇದು ಇವರ ನಿಷ್ಕಾಂಕ್ಷತೆಯಿಂದ ಈಗಲೂ ಶೋಭಿಸುತ್ತಿದೆ ಈಗ ಈನಗರದ ಪ್ರಜಾಸಂಖ್ಯೆ 25 000ಕ್ಕೆ ಹೆಚ್ಚಿದೆ ಮತ್ತು ಇದರ ಪ್ರಜಾ ಬಾಹುಳ್ಯ ದಿನೇ ದಿನೇ ಹೆಚ್ಚಿ ಇದು ಅಭಿವೃದ್ಧಿಸ್ಥಿತಿಗೆ ಬರುತ್ತಾ ಇರುವುದರಿಂದ ಈಗ ಇರುವ ನೀರಿನವಸತಿಯು ಬಹುವ ಟ್ಟಿಗೆ ಸಾಲದಾಗಿರುತ್ತೆ ಈಚಿನ ವರ್ಷಗಳಲ್ಲಿ ಪ್ರತಿವರ್ಷ ಜನವರಿ ತಿಂಗಳಾಗಾಯ್ತು ಏಪ್ರಿಲ್ ತಿಂಗಳವರಿವಿಗೂ ನೀರಿನ ತಾಪವು ಒದಗುತ್ತಿದ್ದು ಈ ವರ್ಷ ಈ ಪರಿಸ್ಥಿತಿ ತುಂಬಾ ವಿಷಮಾವಸ್ಥೆಗೆ ಬಂದಿತ್ತು ಆದುದರಿಂದ ಈ ವರ್ಷವೆ ಇಲ್ಲಿನ ನೀರು ಸರಬರಾಜು ವ್ಯವಸ್ಥೆಯನ್ನು ಸರಿಪಡಿಸದಿದ್ದಲ್ಲಿ ಮುಂದಿನ ಬೇಸಿಗೆಯ ಪರಿಸ್ಥಿತಿಯೊ ಚಿಸಲಾಗದಷ್ಟು ಕಷ್ಟವಾಗುವಂತೆ ಕಂಡುಬರುತ್ತೆ ಈ ವಿಷಯದಲ್ಲಿ ತಾವು ಈ ಕೆಳಗೆ ಕಂಡಕೆಲಸಗಳನ್ನು ಮಾಡಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ

ಕಳೆದ ನವೆಂಬರ್ ತಿಂಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ದಯಮಾಡಿಸಿದ್ದಾಗ ನಾವು ಮಾಡಿಕೊಂಡ ಮನವಿಯನ್ನು ಮನ್ನಿಸಿ ಈ ಪಟ್ಟಣದ ನೀರು ಸರಬರಾಜು ವ್ಯವಸ್ಥೆಯನ್ನು ಸರಿಪಡಿಸಲು ಒಂದು ಸಂಪೂರ್ಣ ಯೋಜನೆಯನ್ನು (Comprehensive scheme) ತಯಾರಿಸಿ ಕಳುಹಿಸಬೇಕೆಂದು ಸರ್ಕಾರದಿಂದ ಸೂಚನೆ ಬಂದಿರುತ್ತೆ ಈ ಬಗ್ಗೆ ಯೋಜನೆಯನ್ನು ತಯಾರಿಸಿ ಕೊಡಬೆ ಕೆಂದು ನಾವುಗಳ ಸ್ಯಾನಿಟರಿ ಇಂಜನಿಯರವರನ್ನು ಪ್ರಾರ್ಥಿಸಿಕೊಳ್ಳಲಾಗಿ ಅವರ ಬೋರ್ಡ್‌ಗಳನ್ನು ಹಾಕಿ ನೀರ ವಸತಿಯನ್ನು ಪರಿಪಡಿಸಿಕೊಳ್ಳುವವರೆಗೂ ಯಾ ಜನೆಯನ್ನು ತಯಾರು ಮಾಡಲು ಸಾಧ್ಯವಿಲ್ಲವಾಗಿ ಕೆಲವು ತಿಂ ಆದರೆ ಈ ಪೌರಸಭೆಯಲ್ಲಿ ಇದಕ್ಕೆ ಸಾಕಷ್ಟು ಹಣವಿಲ್ಲದೆ ಈ ಕೆಲಸಗಳನ್ನು ತಾವು ಮಾಡಿಸಿಕೊಡಬೇಕಾಗಿ ಪ್ರಾರ್ಥಿಸಿದ್ದರಿಂದ ಸಾಲವಾಗಿ ಹಣವನ್ನು ಕೊಡಲಾಗಿದೆ ಮತ್ತು ಈ ನಗರದಲ್ಲಿ ಕಾರ್ಯಸಿದ್ಧರಾಗಿರುತ್ತೆ

ಕಳೆದ ಡಿಸೆಂಬರ್ ತಿಂಗಳಲ್ಲಿ ಮಾನ್ಯ ಮಂತ್ರಿಗಳು ಇಲ್ಲಿಗೆ ದಯ ಮಾಡಿಸಿದ್ದಾಗ ನಾವು ಮಾಡಿಕೊಂಡ ವಿನಯವನ್ನು ಇನ್ನಿಸಿ ಈ ಪಟ್ಟಣದ ನೀರು ಸರಬರಾಜು ವ್ಯವಸ್ಥೆಯನ್ನು ಸರಿಪಡಿಸಲು ಒಂದು ಸಂಪೂರ್ಣ ಯೋಜನೆಯನ್ನು (Comprehensive scheme) ತಯಾರಿಸಿ ಕಳುಹಿಸಬೇಕೆಂದು ಸರ್ಕಾರದಿಂದ ಸೂಚನೆ ಬಂದಿರುತ್ತೆ ಈ ಬಗ್ಗೆ ಯೋಜನೆಯನ್ನು ತಯಾರಿಸಿ ಕೊಡಬೆ ಕೆಂದು ನಾವುಗಳು ಸ್ಯಾನಿಟರಿ ಇಂಜನಿಯರ್ ರವರನ್ನು ಪ್ರಾರ್ಥಿಸಿಕೊಳ್ಳಲಾಗಿ ಅವರು ಬೋರ್ವೆಲ್‌ಗಳನ್ನು ಹಾಕಿ ನೀರುವಸತಿಯನ್ನು ಧೃಡಪಡಿಸಿಕೊಳ್ಳುವವರೆಗೂ ಯೋಜನೆಯನ್ನು ತಯಾರಿಸಿ ಕೊಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ ಆದರೆ ಈ ಪೌರಸಭೆಯಲ್ಲಿ ದ್ರವ್ಯಾನುಕೂಲವಿಲ್ಲವೆ ಈ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲವಾಗಿರುತ್ತೆ ಆದುದರಿಂದ ಈ ಕೂಡಲೇ ಎರಡು ಲಕ್ಷ ರೂಪಾಯಿಗಳನ್ನು ಅರ್ಧಭಾಗ ಸರ್ಕಾರದ ಗ್ರಾಂಟು ರೂಪದಲ್ಲಿ ಇನ್ನರ್ಧಭಾಗ ಸಾಲವಾಗಿಯೂ, ಈ ನಗರದ ನೀರಿನಸರಬರಾಜು ವ್ಯವಸ್ಥೆಗಾಗಿ ಮಂಜೂರು ಮಾಡಿಕೊಡಬೆ ಕೆಂದು ಪ್ರಾರ್ಥಿಸುತ್ತೇವೆ ಈ ನಗರವು ವ್ಯಾಪಾರ ಕೈಗಾರಿಕಗಳ ಕೇಂದ್ರವಲ್ಲವಾಗಿ ಮುನಿಸಿಪಾಲಿಟಿಯ ವರಮಾನ ತುಂಬಾ ಅಲ್ಪವಾಗಿರುತ್ತೆ ಆದರೆ ಈಗ ಸಿಬ್ಬಂದಿ ಮತ್ತು ಕಾಂಗಾರಿಗಳ ಖರ್ಚು ಹೆಚ್ಚಿರುವುದರಿಂದ ಮುನಿಸಿಪಾಲಿಟಿಯು ಈಗಿನ ಆರ್ಥಿಕ ಪರಿಸ್ಥಿತಿ ತುಂಬಾ ಕನಿಷ್ಠದೆಶೆಯಲ್ಲಿರುತ್ತೆ ಆದ್ದರಿಂದ ಸರ್ಕಾರದವರ ಪೂರ್ಣ ದ್ರವ್ಯಸಹಯವಿಲ್ಲದೆ ನಮ್ಮ ಈ ಕೊರತೆಯು ನಿವಾರಣೆಯಾಗುವಂತಿಲ್ಲ

ಈಗ ಈ ನಗರಕ್ಕೆ ಒಂದು ಬೋರ್‌ವೆಲ್ ಯಂತ್ರವನ್ನು ಮಾತ್ರ ಕಳುಹಿಸಿರುತ್ತಾರೆ ಇದರಿಂದ ಕೆಲಸಗಳು ನಿದಾನವಾಗಿ ನಮಗೆ ಜಾಗ್ರತೆ ಪರಿಹಾರ ದೊರೆಯುವ ಸಂಭವವಿರುವುದಿಲ್ಲಾ ಆದುದರಿಂದ ಇನ್ನೂ 2 3 ಯಂತ್ರಗಳನ್ನು ಇಲ್ಲಿಗೆ ಕಳುಹಿಸಿ ಅತಿಜರೂರಾಗಿ ಈ ಕೆಲಸಗಳನ್ನು ಮಾಡಿಸಿ ಮುಗಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ

ಈ ನಗರದ ಆಸ್ಪತ್ರೆಗೆ ಈಗಿನಲೈನಿನಿಂದ ನೀರು ಸರಿಯಾಗಿ ಒದಗದೆ ರೋಗಿಗಳಿಗೆ ತುಂಬಾತೊಂದರೆ ಇರುತ್ತೆ ಆದ್ದರಿಂದ ಇಲ್ಲಿಗೆ ನೀರುಸರಬರಾಜನ್ನು ಉತ್ತಮಪಡಿಸಲು ಬೇರೆ ಪೈಪ್‌ಲೈನನ್ನು ಹಾಕಲು ಪೌರಸಭೆಯವರು ಹಣವನ್ನು ಒದಗಿಸಿ ಏರ್ಪಾಡುಮಾಡಿ ಬಹಳಕಾಲವಾಯಿತು ಆದರೆ ಈ ಕೆಲಸಕ್ಕೆ ಬೇಕಾಗುವ ಕಬ್ಬಿಣದ ಪೈಪುಗಳು ಭದ್ರಾವತಿ ಕಾರ್ಖಾನೆಯಿಂದ ಸಪ್ಲೈ ಆಗದೆ ಕೆಲಸ ನಿಂತಿರುತ್ತೆ ಆದ್ದರಿಂದ ಈ ಕೆಲಸಕ್ಕೆ ಬೇಕಾಗುವ ಪೈಪುಗಳನ್ನು ಈ ಕೂಡಲೆ ಭದ್ರಾವತಿ ಕಾರ್ಖಾನೆಯಿಂದ ಒದಗಿಸಲು ಏರ್ಪಾಡು ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ

ಈ ನಮ್ಮ ಕೊರತೆಗಳನ್ನು ತಾವು ಅತಿ ತ್ವರಿತವಾಗಿ ನಿವಾರಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ

ಸರ್ವಶಕ್ತಿ ಲೋಕಮಾತೆ ಶ್ರೀ ಕೋಲಾಹಲ ಪುರೇಶ್ವರಿಯವರ ನಮ್ಮ ವಿಹಾರಾಜರಾದ ಶ್ರೀವ ಜ್ಞಯ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ರವರಿಗೂ ರಾಜವರ್ಗದವರಿಗೂ ನಮ್ಮ ಪ್ರಜಾಸರ್ಕಾರದ ಸಕಲ ಮಂತ್ರಿವರ್ಯರಿಗೂ ತಮಗೂ ತಮ್ಮ ಕುಟುಂಬವರ್ಗದವರಿಗೂ ಆಯುರಾರೋಗ್ಯ ಐಶ್ವರ್ಯಾದಿ ಸಕಲಸಂಪತ್ತುಗಳನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ ಸ್ವಾಮಿ

ಇತಿ ತಮ್ಮ ವಿಶ್ವಾಸಿಗಳಾದ,

ಕೊ ಲಾರ
5-5-1949

ಪೌರಸಭಾಧ್ಯಕ್ಷರು ಮತ್ತು ಸದಸ್ಯರು

ಶ್ರೀ ಗೋಪೀನಾಥ ಪ್ರೆಸ್ ಕೋಲಾರ